2ನೇ ಮಹಡಿ, ಡಾ: ಬಿ.ಆರ್.ಅಂಬೇಡ್ಕರ್
ವೀಧಿ, ಬೆಂಗಳೂರು.ದಿ: 8-8-1986.

## ಸುತ್ತೋಲೆ

ವಿಷಯ: ನಾಯಕ್, ನಾಯಕ್ಕ, ಬೇಡ, ವಾಲ್ಮೀಕಿ, ಪರಿವಾರ ತಳವಾರ, ಕುರುಬ ಮತ್ತು ಮಲೇರು ಜಾತಿಗಳಿಗೆ ಸೇರಿದವರಿಗೆ ಶೈಕ್ಷಣಿಕ ಸೌಲಭ್ಯಗಳನ್ನು ವಿಸ್ತರಿಸುವ ಬಗ್ಗೆ — ಸ್ಪಷ್ಟೀಕರಣ.

ಉಲ್ಲೇಖ: ಸ.ಆದೇಶ.ಎಸ್‌ಡಬ್ಲ್ಯೂಎಲ್ 63 ಎಸ್‌ಎಡಿ 85
ದಿನಾಂಕ: 23-1-86.

—oOo—

ಉಲ್ಲೇಖದಲ್ಲಿ ಕಾಣಿಸಿರುವ ಸರ್ಕಾರದ ಆದೇಶದಲ್ಲಿ ನಾಯಕ್, ನಾಯಕ್ಕ, ಬೇಡ, ವಾಲ್ಮೀಕಿ, ಪರಿವಾರ ಮತ್ತು ತಳವಾರ ಜಾತಿಗಳನ್ನು ''ನಾಯಕ'' ಜಾತಿಯ ಪರ್ಯಾಯ ಪದಗಳೆಂದು ಪರಿಗಣಿಸುವ ಬಗ್ಗೆ ಭಾರತ ಸರ್ಕಾರದ ಒಪ್ಪಿಗೆಯ ನಿರೀಕ್ಷಣೆ ಮೇರೆಗೆ ರಾಜ್ಯದಲ್ಲಿನ ಮೇಲ್ಕಂಡ ಆರು ಜಾತಿಗಳಿಗೆ ಸೇರಿದವರಿಗೆ ಪರಿಶಿಷ್ಟ ವರ್ಗದವರಿಗೆ ದೊರೆಯುತ್ತಿರುವ ಕೆಳಕಂಡ ಶೈಕ್ಷಣಿಕ ಸೌಲಭ್ಯಗಳನ್ನು ವಿಸ್ತರಿಸಲಾಗಿರುವುದು ಸರಿಯಷ್ಟೆ.

(ಅ) ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ಮೀಸಲಾತಿ.

(ಆ) ಶೈಕ್ಷಣಿಕ ರಿಯಾಯಿತಿಗಳು.

2. ಸದರಿ ದಿನಾಂಕ: 23-1-86 ರ ಆದೇಶದಲ್ಲಿ ಮೇಲಿನ ಕಂಡಿಕೆಯಲ್ಲಿ ಕಾಣಿಸಿರುವ ಆರು ಜಾತಿಗಳ ಜೊತೆಗೆ ಮಲೇರು ಮತ್ತು ಕುರುಬ ಜಾತಿಗಳಿಗೆ ಸೇರಿದವರಿಗೂ ಪರಿಶಿಷ್ಟ ವರ್ಗದವರಿಗೆ ದೊರೆಯುತ್ತಿರುವ ಶೈಕ್ಷಣಿಕ ಸಂಸ್ಥೆಗಳಲ್ಲಿನ ಪ್ರವೇಶದ ಮೀಸಲಾತಿ ಹಾಗೂ ಶೈಕ್ಷಣಿಕ ರಿಯಾಯಿತಿಗಳನ್ನು ವಿಸ್ತರಿಸಲಾಗಿದೆ.

3. ಇತ್ತೀಚೆಗೆ ಕೆಲವು ಸಂಘ ಸಂಸ್ಥೆಗಳ ಪ್ರತಿನಿಧಿಗಳು ಮೇಲ್ಕಂಡ ಎಂಟು ಜಾತಿಗಳವರಿಗೆ ಸೇರಿದ ವಿದ್ಯಾರ್ಥಿಗಳಿಗೆ ತಹಸೀಲ್ದಾರರುಗಳು ಪರಿಶಿಷ್ಟ ವರ್ಗಕ್ಕೆ ಸೇರಿದವರೆಂದು ಫಾರಂ ನಂ.1 ರಲ್ಲಿ ಜಾತಿ ಪ್ರಮಾಣ ಪತ್ರ ಕೊಡುತ್ತಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಬಹು ತೊಂದರೆಯಾಗಿರುವುದರಿಂದ ಕೂಡಲೇ ಜಾತಿ ಪ್ರಮಾಣ ಪತ್ರ ನೀಡುವ ಅಧಿಕಾರಿಗಳಿಗೆ ಸೂಕ್ತ ಸೂಚನೆ ಕೊಡಬೇಕಾಗಿ ಸರ್ಕಾರವನ್ನು ಕೋರಿರುತ್ತಾರೆ. ಆದ್ದರಿಂದ ಈ ಕೆಳಕಂಡ ಸ್ಪಷ್ಟೀಕರಣ ನೀಡಲಾಗಿದೆ.

4. ನಾಯಕ್, ನಾಯಕ್ಕ, ಬೇಡ, ವಾಲ್ಮೀಕಿ, ಪರಿವಾರ, ತಳವಾರ, ಮಲೇರು ಮತ್ತು ಕುರುಬ ಜಾತಿಗಳಿಗೆ ಸೇರಿದವರಿಗೆ ಪರಿಶಿಷ್ಟ ವರ್ಗದವರಿಗೆ ದೊರೆಯುತ್ತಿರುವ ಶೈಕ್ಷಣಿಕ ಸೌಲಭ್ಯಗಳನ್ನು ಮಾತ್ರ ವಿಸ್ತರಿಸಲಾಗಿದೆ.

5. ಈ ಜಾತಿಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಅವರು ಈಗ ಹಾಲಿ ಯಾವ ಜಾತಿಗೆ ಸೇರಿದವರೋ ಆ ಜಾತಿಗೆ ಸಂಬಂಧಪಟ್ಟ ಜಾತಿ ಪ್ರಮಾಣ ಪತ್ರಗಳನ್ನು, ಜಾತಿ ಪ್ರಮಾಣ ಪತ್ರಗಳನ್ನು ಕೊಡುವ ಅಧಿಕಾರ ಹೊಂದಿರುವ ಅಧಿಕಾರಿಗಳು ಕೊಡತಕ್ಕದ್ದು.

6. ಸದರಿ ಜಾತಿ ಪ್ರಮಾಣ ಪತ್ರಗಳ ಆಧಾರದ ಮೇರೆಗೆ ಮೇಲಿನ 8 ಜಾತಿಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಶೈಕ್ಷಣಿಕ ಸಂಸ್ಥೆಗಳಿಗೆ ಪ್ರವೇಶ ನೀಡುವಾಗ ಪರಿಶಿಷ್ಟ ವರ್ಗದವರಿಗೆ ಲಭ್ಯವಿರುವ ಮೀಸಲಾತಿ ಸೌಲಭ್ಯಗಳನ್ನು ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಕೊಡತಕ್ಕದ್ದು.

ಸಹಿ:—
(ಡಿ.ಎಸ್.ತಿಪ್ಪೇಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ.

:ನಕಲು:

ಕ್ರ.ಸಂ.ಜಿಪಜಾಪವಕ:ಬಿ-9:ಸಿಆರ್-55:86-87 ದಿನಾಂಕ: 26-8-1986.

ಸುತ್ತೋಲೆಯ ಪ್ರತಿಯ ನಕಲನ್ನು (1) ಜಿಲ್ಲೆಯ ಎಲ್ಲಾ ತಹಸೀಲ್ದಾರರಿಗೂ, ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.
(2) ಸಂಬಂಧಪಟ್ಟ ಎಲ್ಲಾ ಶಾಲಾ ಕಾಲೇಜಿನ ಪ್ರಿನ್ಸಿಪಾಲರಿಗೂ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

ಜಿಲ್ಲಾ ಅಧಿಕಾರಿ
ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಕಲ್ಯಾಣ,
ಹಾಸನ ಜಿಲ್ಲೆ, ಹಾಸನ.